ಶ್ರೀ ಎಸ್. ಬಂಗಾರಪ್ಪ: ಈಗಾಗಲೇ ಈ ಬಗ್ಗೆ ಇಲ್ಲಿ ಚರ್ಚೆಯಾಗಿದೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ ಇಲ್ಲಿ ನೋಡಿ ಇವರು ಸಭಾತ್ಯಾಗ ಮಾಡಬೇಕೆಂದು ನಮಗೆ ಹೇಳಿಕೊಡುತ್ತಿದ್ದಾರೆ.

ಅಧ್ಯಕ್ಷರು : ಅವರು ನಿಮ್ಮ ಹಕ್ಕು ಮೊಟಕುಗೊಳಿಸುತ್ತಿಲ್ಲ. ನೀವು ಪ್ರತಿಭಟನೆ ಮಾಡಬೇಕೆಂದು ಸಿದ್ಧವಾಗಿದ್ದೀರಿ. ನೀವು ಏಕೆ ಅವರಿಗೆ ಅಡ್ಡ ಹೋಗುತ್ತೀರಿ?

(ಗೊಂದಲ)

ಶ್ರೀ ಎಸ್. ಬಂಗಾರಪ್ಪ: ನಾನು ಕೇವಲ "ಪ್ರತಿಭಟನೆ ಮಾಡುತ್ತೇನೆ" ಎಂದಷ್ಟು ಹೇಳಿದೆ. ಆದರೆ ಪ್ರತಿಭಟನೆ ಮಾಡುವುದಕ್ಕೆ ಅನೇಕ ದಾರಿಗಳಿವೆ.

ಶ್ರೀ ಜೆ.ಹೆಚ್ ಪಟೇಲ್ : ನೀವು ವಾಕೌಟ್‌ಮಾಡುತ್ತೇವೆಂದು ಹೇಳಿದರೆ ನಮ್ಮದೇನೂ ಆಭ್ಯಂತರ ಇಲ್ಲ.

ಶ್ರೀ ಎಸ್. ಬಂಗಾರಪ್ಪ: ಮಾನ್ಯ ಸಭಾಧ್ಯಕ್ಷರೇ ಇವರ ನೀತಿಯನ್ನು ನಾವು ಪ್ರತಿಭಟಿಸುತ್ತೇವೆ. ಉಚಿತವಾಗಿ ವಿದ್ಯುತನ್ನು ರೈತರಿಗೆ ಕೊಡುತ್ತೇವೆ ಎನ್ನತಕ್ಕ ಮಾತನ್ನು ಅವರು ಆಡಬೇಕಾಗಿತ್ತು ಆದರೆ ಆಡಿಲ್ಲ. ಆ ನೀತಿಯನ್ನು ಪ್ರತಿಭಟಿಸಿ ನಮ್ಮ ಪಕ್ಷದವರು ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಮಾನ್ಯ ಬಂಗಾರಪ್ಪನವರ ನೇತೃತ್ವದಲ್ಲಿ ಕರ್ನಾಟಕ ಕಾಂಗ್ರೇಸ್ ಪಕ್ಷದ ಸದಸ್ಯರುಗಳು ಸಭಾತ್ಯಾಗ ಮಾಡಿದರು)

(ಗೊಂದಲ)

ಅಧ್ಯಕ್ಷರು : ಮಾನ್ಯ ನಂಜೇಗೌಡರೇ, ಮೊನ್ನೆ ತಾವು ಭಾಷಣ ಮಾಡತಕ್ಕ ಸಂದರ್ಭದಲ್ಲಿ ಕೆಲವು ಮಾತುಗಳನ್ನು ಆಡಿದ್ದೀರಿ. ಅದು ಡೆಕ್ಕನ್ ಹೆರಾಲ್ಡ್ ಮತ್ತು ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಬಂದಿದೆ. ತಾವು ಶ್ರೀ ಗುರುಪ್ರಸಾದ್ ಎಂಬುವವರನ್ನು ಒಳಪಡಿಸಿಕೊಂಡು ಅವರು ಭ್ರಷ್ಟರು ಅನ್ನುವಂತಹ ಅರ್ಥದಲ್ಲಿ ಪತ್ರಿಕೆಗಳಲ್ಲಿ ಪ್ರಚಾರ ಆಗಿದೆ ಎಂದು ಹೇಳಿ ಅವರು ತಮ್ಮ ವಕೀಲರ ಮೂಲಕ ಒಂದು ಪತ್ರವನ್ನು ನನಗೆ ಕಳುಹಿಸಿಕೊಟ್ಟಿದ್ದಾರೆ. ಅವರು ಆ ತರಹದವರು ಅಲ್ಲ. ಅವರ ಮೇಲೆ ಅಂತಹ ಯಾವ ಘಟನೆಗಳು ಆಗಿಲ್ಲ. ಯಾವುದೋ ಒಂದು ಮೊಕದ್ದಮೆ ಮಾತ್ರ ಇದೆ ಎಂದು ಅವರು ತಮ್ಮ ಪತ್ರದಲ್ಲಿ ಹೇಳಿದ್ದಾರೆ. ಈ ಬಗ್ಗೆ ತಾವೇ ಕ್ಲಾರಿಫೈ ಮಾಡಿದರೆ ಬೆಟರ್ ಎಂದು ಕಾಣಿಸುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಆ ವಿಷಯಕ್ಕೆ ಹೋಗುವುದಕ್ಕೆ ಮುಂಚೆ ನಾವು ಇಲ್ಲಿ ಕುಳಿತಿರುವಂತಾದ್ದು ವಿದ್ಯುತ್ನು ನಾವು ಫ್ರೀಯಾಗಿ ಐ.ಪಿ. ಸೆಟ್ಟುಗಳಿಗೆ ಕೊಡುತ್ತಿದ್ದೇವೆ. ಇದುವರೆಗೂ ಅದೇ ಪದ್ಧತಿ ಇದೆ, ಮುಂದೂವರೆಯುತ್ತಿದೆ. ಅದನ್ನು ತಾವು ಕಂಟಿನ್ಯೂ ಮಾಡುತ್ತೀರಾ? ಯಾವುದೇ ಕಾರಣಕ್ಕೆ ಐ.ಪಿ. ಸೆಟ್ಟುಗಳ ಮೇಲೆ ನೀವು ಯಾವುದೇ ರೇಟ್ ಫೀಕ್ಸ್ ಮಾಡುವುದಕ್ಕೆ ಬಿ.ಜೆ.ಪಿ. ಸಂಪೂರ್ಣವಾಗಿ ವಿರೋಧ ಇದೆ. ಐ.ಪಿ. ಸೆಟ್ಟುಗಳ ಮೇಲೆ ಯಾವುದೇ ರೀತಿಯಲ್ಲ ದರವನ್ನು ಹೇರಬಾರದು ಎಂದು ಕಮಿಟಿಯಲ್ಲಿ ಪ್ರೊಟೆಸ್ಟ್ ಮಾಡಿದವರಲ್ಲಿ ನಾವೇ ಮೊದಲಿಗರು. ಇದು ರೆಕಾರ್ಡ್ಗೆ ಹೋಗಲಿ. ಉಚಿತವಾಗಿ ರೈತರಿಗೆ ವಿದ್ಯುತ್ ಸರಬರಾಜು ಮಾಡುತ್ತೇವೆ ಎಂದು ಭರವಸೆ ನೀಡುತ್ತೀರಿ ಎನ್ನುವ ಆಧಾರದ ಮೇಲೆ ನಾವು ಇಲ್ಲಿ ಕುಳಿತಿದ್ದೇವೆ.